**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಎಂಟನೇ ಅಧಿವೇಶನ**

# ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕ, 2015

**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 26)**

ಎಲ್ಲ ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಕಛೇರಿಗಳಲ್ಲಿ ಕೃಷಿ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆಯನ್ನು ನಿಯಂತ್ರಿಸುವುದಕ್ಕಾಗಿ ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿಯ ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲ ಕೃಷಿ ಕಛೇರಿಗಳಲ್ಲಿ ಸಿಬ್ಬಂದಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆಯನ್ನು ನಿಯಂತ್ರಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ನೇಮಕ" ಎಂದರೆ, ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ನೇರ ನೇಮಕಾತಿಯ ಅಥವಾ ಬಡ್ತಿಯ ಮೂಲಕ ಮಾಡಿದ ನೇಮಕ;

(ಬಿ) "ಸಕ್ಷಮ ಪ್ರಾಧಿಕಾರ" ಎಂದರೆ, ಗ್ರೂಪ್–ಎ ಹುದ್ದೆಗಳ ಸಂಬಂಧದಲ್ಲಿ ಸರ್ಕಾರ ಮತ್ತು ಗ್ರೂಪ್ ಬಿ, ಸಿ ಮತ್ತು ಡಿ ಹುದ್ದೆಗಳ ಸಂಬಂಧದಲ್ಲಿ ಕೃಷಿ ಆಯುಕ್ತರು;

(ಸಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಡಿ) "ಸರ್ಕಾರಿ ಸಂಸ್ಥೆ" ಎಂದರೆ, ಸರ್ಕಾರವು ಸ್ಥಾಪಿಸಿದ ಯಾವುದೇ ಹೆಸರಿನಿಂದ ಕರೆಯಲಾಗುವ ತರಬೇತಿ ಕೇಂದ್ರ, ಆಡಳಿತ ಕಚೇರಿ ಅಥವಾ ಯಾವುವೇ ಇತರ ಸಂಸ್ಥೆಗಳು ಅಥವಾ ಯಾವುವೇ ಇತರ ಕಚೇರಿಗಳು ಮತ್ತು ಅದು ಇವುಗಳನ್ನು ಒಳಗೊಳ್ಳುತ್ತದೆ;

(ಇ) "ಅಧಿಕಾರಿ ಮತ್ತು ಇತರ ಸಿಬ್ಬಂದಿ" ಎಂದರೆ, ಅನುಸೂಚಿ-I ಮತ್ತು ಅನುಸೂಚಿ-IIರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಯಾವುದೇ ಪ್ರವರ್ಗಕ್ಕೆ ನೇಮಕಾತಿ ಪ್ರಾಧಿಕಾರವು ನೇಮಕ ಮಾಡಿದ ಕೃಷಿ ಇಲಾಖೆಯ ಅಧಿಕಾರಿ ಮತ್ತು ಇತರ ಸಿಬ್ಬಂದಿ;

(ಎಫ್) "ಕೌನ್ಸಿಲಿಂಗ್ ಪ್ರಕ್ರಿಯೆ" ಎಂದರೆ, ನೇಮಕಾತಿಗಾಗಿ ಅಥವಾ ವರ್ಗಾವಣೆಗಾಗಿ ಪರಿಗಣಿಸಲ್ಪಟ್ಟ ವ್ಯಕ್ತಿಯೊಬ್ಬರಿಗೆ, ಆತನು ಕಾರ್ಯನಿರ್ವಹಿಸುತ್ತಿರುವ ವಲಯದ ಸ್ಥಳದಲ್ಲಿ ಆತನು ಸಲ್ಲಿಸಿದ ಸೇವಾವಧಿಯ ಮತ್ತು ನಿಯಮಿಸಬಹುದಾದಂಥ ಇತರ ಮಾನದಂಡಗಳ ಆಧಾರದಲ್ಲಿ, ಆದ್ಯತೆಯ ಮೇರೆಗೆ ಸರ್ಕಾರವು ಅಧಿಸೂಚಿಸಿದ ಸ್ಥಳ ಅಥವಾ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ನೀಡುವ ಪ್ರಕ್ರಿಯೆ;

(ಜಿ) "ಗ್ರಾಮೀಣ ಪ್ರದೇಶ" ಎಂದರೆ, ನಗರ ಪ್ರದೇಶವನ್ನು ಹೊರತುಪಡಿಸಿದ ಇತರ ಪ್ರದೇಶ;

(ಹೆಚ್) "ವರ್ಗಾವಣೆ" ಎಂದರೆ, ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯನ್ನು ಒಂದು ಕೆಲಸದ ಸ್ಥಳದಿಂದ ಇನ್ನೊಂದು ಕೆಲಸದ ಸ್ಥಳಕ್ಕೆ ಸ್ಥಳನಿಯುಕ್ತಿಗೊಳಿಸುವುದು;

(ಐ) "ಪ್ರತಿನಿಯೋಜನೆ ಮೇಲೆ ವರ್ಗಾವಣೆ" ಎಂದರೆ, ಅಭಿವೃದ್ಧಿ ಪ್ರಾಧಿಕಾರಕ್ಕೆ ಅಥವಾ ಇತರ ಸರ್ಕಾರಿ ಸಂಸ್ಥೆಗಳಿಗೆ, ಇತರ ಇಲಾಖೆಗಳಿಗೆ ಅಥವಾ ನಿಗಮಗಳಿಗೆ ಅಥವಾ ಮಂಡಳಿಗಳಿಗೆ ಅಥವಾ ಅಚ್ಚುಕಟ್ಟು ಪ್ರದೇಶಗಳಿಗೆ ಐದು ವರ್ಷಗಳಿಗಿಂತ ಹೆಚ್ಚಾಗಿರದ ಅವಧಿಗಾಗಿ ಪ್ರತಿನಿಯೋಜನೆಯ ಮೇಲೆ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ವರ್ಗಾವಣೆ;

(ಜೆ) "ನಗರ ಪ್ರದೇಶ" ಎಂದರೆ, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ಸ್ಥಾಪಿಸಲಾದಂತೆ ನಗರ ಪಾಲಿಕೆ, ನಗರ ಸಭಾ ಪರಿಷತ್ತು, ಪಟ್ಟಣ ಪುರಸಭೆ ಅಥವಾ ಪಟ್ಟಣ ಪಂಚಾಯತ್‌ಗಳ ಮಿತಿಗಳೊಳಗೆ ಇರುವ ಯಾವುದೇ ಪ್ರದೇಶ ಮತ್ತು ಇದು ಸರ್ಕಾರವು ಕಾಲಕಾಲಕ್ಕೆ ಹಾಗೆಂದು ಅಧಿಸೂಚಿಸಿದ ಪ್ರದೇಶ ಮಿತಿಗಳಿಂದ ಅಂಥ ದೂರದವರೆಗೆ ಇರುವ ಯಾವುದೇ ಪ್ರದೇಶವನ್ನು ಒಳಗೊಳ್ಳುತ್ತದೆ;

(ಕೆ) "ವಲಯ" ಎಂದರೆ, ಈ ಕೆಳಗೆ ವರ್ಗೀಕರಿಸಿದ ಯಾವುದೇ ಪ್ರದೇಶ, ಎಂದರೆ:-

(i) "ವಲಯ-ಎ" ಎಂದರೆ, ನಗರ ಪಾಲಿಕೆ ಅಥವಾ ನಗರ ಸಭೆಯ ಮಿತಿಯೊಳಗಿನ ನಗರ ಪ್ರದೇಶ;

(ii) "ವಲಯ-ಬಿ" ಎಂದರೆ, ಪಟ್ಟಣ ಸಭೆ ಮತ್ತು ಪಟ್ಟಣ ಪಂಚಾಯತ್ ಮಿತಿಯೊಳಗಿನ ನಗರ ಪ್ರದೇಶ; ಮತ್ತು

(iii) "ವಲಯ–ಸಿ" ಎಂದರೆ, ವಲಯ–ಎ ಮತ್ತು ವಲಯ–ಬಿ ಅಡಿಯಲ್ಲಿ ಒಳಗೊಂಡಿರದ ಎಲ್ಲ ಇತರ ಪ್ರದೇಶ;

(ಎಲ್) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಿದ ಅನುಸೂಚಿ.

**3. ಕೌನ್ಸಿಲಿಂಗ್ ಮೂಲಕ ಪ್ರಾರಂಭಿಕ ನೇಮಕಾತಿ, ಬಡ್ತಿ ಮತ್ತು ವರ್ಗಾವಣೆ.**– ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ಪ್ರಾರಂಭಿಕ ನೇಮಕಾತಿ, ಬಡ್ತಿ ಮತ್ತು ವರ್ಗಾವಣೆಯನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಕೌನ್ಸಲಿಂಗ್ ಪ್ರಕ್ರಿಯೆ ನಡೆಸುವ ಮೂಲಕ ಮಾಡತಕ್ಕದ್ದು.

**4. ಕಡ್ಡಾಯ ಸೇವೆಗಾಗಿ ಉಪಬಂಧಗಳು.**– (1) IIIನೇ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಬ್ಬ ಅಧಿಕಾರಿ ಮತ್ತು ಇತರ ಸಿಬ್ಬಂದಿಯು, ಅದರ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ವಲಯಗಳಲ್ಲಿ ಕನಿಷ್ಠ ಸಂಖ್ಯೆಯ ವರ್ಷಗಳವರೆಗೆ ಕಡ್ಡಾಯವಾಗಿ ಸೇವೆಯನ್ನು ಸಲ್ಲಿಸತಕ್ಕದ್ದು.

(2) IIIನೇ ಅನುಸೂಚಿಯ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸಂಖ್ಯೆಯ ವರ್ಷಗಳನ್ನು ಪೂರ್ಣಗೊಳಿಸಿದ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ ವರ್ಗಾವಣೆ ಮಾಡಲು ಸರ್ಕಾರವು ಅಧಿಕಾರವನ್ನು ಹೊಂದಿರತಕ್ಕದ್ದು.

**5. ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ಕಡ್ಡಾಯ ಸೇವೆ.**– (1) ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿ ಅಥವಾ ವರ್ಗಾವಣೆಯನ್ನು ಮಾಡುವಾಗ ಸಕ್ಷಮ ಪ್ರಾಧಿಕಾರವು IIIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ವಲಯಗಳಲ್ಲಿರುವ ಖಾಲಿ ಹುದ್ದೆಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಅಂಥ ಖಾಲಿ ಹುದ್ದೆಗಳನ್ನು ಪ್ರಥಮತಃ ಭರ್ತಿ ಮಾಡತಕ್ಕದ್ದು. ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿ ಅಥವಾ ವರ್ಗಾವಣೆಯನ್ನು ಮೊದಲು ಸಿ–ವಲಯಕ್ಕೆ ಮಾಡತಕ್ಕದ್ದು. ಆ ಪ್ರವರ್ಗಕ್ಕೆ ಸೇರಿದ ಖಾಲಿ ಹುದ್ದೆಗಳು ಇಲ್ಲದಿದ್ದರೆ, ನಂತರ ಬಿ–ವಲಯದಲ್ಲಿನ ಖಾಲಿ ಹುದ್ದೆಗಳಿಗೆ ಮತ್ತು ಆನಂತರ ಎ–ವಲಯದಲ್ಲಿನ ಖಾಲಿ ಹುದ್ದೆಗಳಿಗೆ, ಹುದ್ದೆಯ ಪ್ರವರ್ಗದ ಅಧಿಕಾರ ವ್ಯಾಪ್ತಿಯನ್ನಾಧರಿಸಿ, ವರ್ಗಾವಣೆ ಮಾಡತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಸೇವೆಯಲ್ಲಿರುವ ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ಮೊದಲು ಅನುಸೂಚಿ IIIರಲ್ಲಿ ನಿರ್ದಿಷ್ಟಪಡಿಸಿದ ವಲಯದಲ್ಲಿ ಕನಿಷ್ಠ ಸಂಖ್ಯೆಯ ವರ್ಷಗಳವರೆಗೆ ಸೇವೆಯನ್ನು ಸಲ್ಲಿಸದಿರುವ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯನ್ನು ಅಂಥ ವಲಯಕ್ಕೆ ವರ್ಗಾಯಿಸತಕ್ಕದ್ದು:

ಪರಂತು, ಅನುಸೂಚಿ IIIರಲ್ಲಿ ನಿರ್ದಿಷ್ಟಪಡಿಸಿದ ವಲಯಕ್ಕೆ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ಕಡ್ಡಾಯ ವರ್ಗಾವಣೆಗೆ ಸಂಬಂಧಿಸಿದ ಉಪಬಂಧಗಳನ್ನು,–

(i) ಐವತ್ತೈದು ವರ್ಷಗಳ ವಯಸ್ಸಿನವನಾದ ವ್ಯಕ್ತಿಗೆ;

(ii) ಪತಿ ಮತ್ತು ಪತ್ನಿಯರಿಬ್ಬರು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ನೌಕರರಾಗಿರುವ ಸಂದರ್ಭದಲ್ಲಿ, ದಂಪತಿಗಳಲ್ಲಿ ಒಬ್ಬರು ಬೇರೆ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದರೆ, ಆಗ ಇನ್ನೊಬ್ಬ ಸಂಗಾತಿಯನ್ನು, ಸ್ಪಷ್ಟ ಖಾಲಿ ಹುದ್ದೆಯ ಲಭ್ಯತೆಗೆ ಒಳಪಟ್ಟು, ಆತನು ಅದೇ ಸ್ಥಳದಲ್ಲಿದ್ದರೆ, ಅದೇ ಸ್ಥಳಕ್ಕೆ ಅಥವಾ ಹತ್ತಿರದ ಸ್ಥಳಕ್ಕೆ ವರ್ಗಾಯಿಸಬಹುದಾದ ಪ್ರಕರಣಕ್ಕೆ;

(iii) ಆಕೆಯು ವಿಧವೆಯಾಗಿದ್ದರೆ ಆ ನೌಕರಳಿಗೆ;

(iv) ಆತನು ವಿಕಲಚೇತನನಾಗಿದ್ದರೆ ಆ ನೌಕರನಿಗೆ;

(v) ನೌಕರನ ಪತ್ನಿ ಅಥವಾ ಮಕ್ಕಳು ಗಂಭೀರ ಖಾಯಿಲೆಯಿಂದ ನರಳುತ್ತಿದ್ದು, ಅದಕ್ಕಾಗಿ ಆತನು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ವೈದ್ಯಕೀಯ ಚಿಕಿತ್ಸೆ ಲಭ್ಯವಿರದಿರುವ ಮತ್ತು ಅಗತ್ಯ ವೈದ್ಯಕೀಯ ಚಿಕಿತ್ಸೆ ಒದಗಿಸುವ ಸಲುವಾಗಿ ಅಂಥ ಚಿಕಿತ್ಸೆ ಲಭ್ಯವಿರುವ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಾಗಿರುವ ನೌಕರನಿಗೆ,

–ಅನ್ವಯವಾಗತಕ್ಕದಲ್ಲ:

ಮತ್ತು ಪರಂತು, ಖಾಯಿಲೆಯ ಸ್ವರೂಪವನ್ನು ನಿರ್ದಿಷ್ಟಪಡಿಸಿ, ಆತನು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಅಗತ್ಯ ಚಿಕಿತ್ಸೆ ಲಭ್ಯವಿಲ್ಲವೆಂಬ ವಾಸ್ತವವನ್ನು ಹೇಳಿ, ಯಾವ ಸ್ಥಳದಲ್ಲಿ ಅಗತ್ಯ ಚಿಕಿತ್ಸೆ ಲಭ್ಯವಿಯೆಂದು ನಿರ್ದಿಷ್ಟಪಡಿಸಿ ಮತ್ತು ಅಗತ್ಯ ವೈದ್ಯಕೀಯ ಚಿಕಿತ್ಸೆಯನ್ನು ಆತನಿಗೆ ಒದಗಿಸುವ ಅಂಥ ಸ್ಥಳಕ್ಕೆ ಆತನನ್ನು ವರ್ಗಾವಣೆ ಮಾಡುವುದು ಅವಶ್ಯಕವೆಂದು ಪ್ರಮಾಣೀಕರಿಸಿ, ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ನೌಕರನು ಹಾಜರುಪಡಿಸಿದ ಹೊರತು ಯಾವುದೇ ವರ್ಗಾವಣೆಯನ್ನು ಪರಿಗಣಿಸತಕ್ಕದಲ್ಲ.

(3) ಯಾರೇ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯು, ತನ್ನ ಸ್ವಂತ ತಾಲ್ಲೂಕಿನಲ್ಲಿ ನಿಯೋಜನೆಗೆ ಹಕ್ಕುಳ್ಳವರಾಗಿರತಕ್ಕದ್ದಲ್ಲ.

(4) ಕಡ್ಡಾಯ ಸೇವೆ ಅಗತ್ಯವಿರುವ ಹುದ್ದೆಯ ಸಂಬಂಧದಲ್ಲಿ ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿ ಅಥವಾ ವರ್ಗಾವಣೆಗಾಗಿ ಯಾವುದೇ ಖಾಲಿ ಸ್ಥಳ ಲಭ್ಯವಿರದಿದ್ದರೆ, ಅಂಥ ವಲಯದಲ್ಲಿ ಗರಿಷ್ಠ ಸಂಖ್ಯೆಯ ಸೇವಾ ವರ್ಷಗಳನ್ನು ಪೂರ್ಣಗೊಳಿಸಿರುವ ಅಧಿಕಾರಿಯ ಮತ್ತು ಇತರ ಸಿಬ್ಬಂದಿಯ ವರ್ಗಾವಣೆಯ ಮೂಲಕ ಖಾಲಿ ಹುದ್ದೆಯನ್ನು ಸೃಜಿಸಬಹುದು. ಸಿ–ವಲಯದಲ್ಲಿ ಹೆಚ್ಚು ಸಂಖ್ಯೆಯ ವರ್ಷಗಳ ಕಾಲ ಸೇವೆ ಸಲ್ಲಿಸಿರುವ ವ್ಯಕ್ತಿಯನ್ನು ಸಿ–ವಲಯದಿಂದ ಬಿ–ವಲಯಕ್ಕೆ ಮತ್ತು ಅದೇ ರೀತಿಯಲ್ಲಿಯೇ ಬಿ–ವಲಯದಿಂದ ಎ–ವಲಯಕ್ಕೆ ವರ್ಗಾಯಿಸಬಹುದು.

(5) ವರ್ಗಾವಣೆಯು ಸೇವಾ ಅವಧಿಯನ್ನು ಮತ್ತು ನಿಯಮಿಸಬಹುದಾದ ಅಂಥ ಇತರ ಮಾನದಂಡಗಳನ್ನು ಆಧರಿಸಿರತಕ್ಕದ್ದು.

**6. ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ವರ್ಗಾವಣೆ.–** (1) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಸೇವೆಯಲ್ಲಿರುವ ಮತ್ತು ಒಂದು ಪ್ರದೇಶ ಅಥವಾ ಒಂದು

ವಲಯದಲ್ಲಿನ ಸರ್ಕಾರಿ ಕಛೇರಿಯಲ್ಲಿ ಅಥವಾ ಸರ್ಕಾರಿ ಸಂಸ್ಥೆಯಲ್ಲಿ ಅಗತ್ಯವಿರುವ ಕನಿಷ್ಠ ಸಂಖ್ಯೆಯ ವರ್ಷಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸಿದ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ, ಅವರ ಸೇವಾವಧಿಯನ್ನು ಮತ್ತು ನಿಯಮಿಸಬಹುದಾಂಥ ಮಾನದಂಡಗಳನ್ನು ಪರಿಗಣಿಸಿ ಅದೇ ವಲಯದಲ್ಲಿನ ಅಥವಾ ಮುಂದಿನ ವಲಯ ಅಥವಾ ಪ್ರದೇಶದಲ್ಲಿನ ಬೇರೊಂದು ಸರ್ಕಾರಿ ಕಛೇರಿ ಅಥವಾ ಸರ್ಕಾರಿ ಸಂಸ್ಥೆಗಳಿಗೆ ಕೌನ್ಸಲಿಂಗ್ ಪ್ರಕ್ರಿಯೆಯ ಮೂಲಕ ವರ್ಗಾವಣೆ ಮಾಡಬಹುದು:

ಪರಂತು, ಆ ವರ್ಷದಲ್ಲಿನ ಅಂಥ ವರ್ಗಾವಣೆಗಳ ಒಟ್ಟು ಸಂಖ್ಯೆಯು, ಆ ಹುದ್ದೆಯ ಪ್ರವರ್ಗದಲ್ಲಿನ ಕೇಡರ್ ಸಾಮರ್ಥ್ಯದ ಸಂಖ್ಯೆಯ ಶೇಕಡಾ ಹತ್ತರಷ್ಟನ್ನು ಮೀರತಕ್ಕದ್ದಲ್ಲ.

(2) ಅಮಾನತ್ತಿನಿಂದ ಪುನಃಸ್ಥಾಪನೆಯ (reinstatement) ಮೇಲಿರುವ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯನ್ನು ಉನ್ನತ ವಲಯಕ್ಕೆ ನಿಯೋಜಿಸತಕ್ಕದ್ದಲ್ಲ.

**ವಿವರಣೆ.**– ಉನ್ನತ ವಲಯ ಎಂದರೆ, ಅಮಾನತ್ತಿಗೆ ಮೊದಲು ಅಧಿಕಾರಿಯು ಅಥವಾ ಇತರ ಸಿಬ್ಬಂದಿಯು ಯಾವ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದರೊ ಆ ವಲಯಕ್ಕಿಂತ ಉನ್ನತ ವಲಯ. ಎ–ವಲಯವನ್ನು ಬಿ– ವಲಯಕ್ಕಿಂತ ಉನ್ನತ ವಲಯವೆಂದು ಮತ್ತು ಬಿ–ವಲಯವು ಸಿ–ವಲಯಕ್ಕಿಂತ ಉನ್ನತ ವಲಯವೆಂದು ಪರಿಗಣಿಸತಕ್ಕದ್ದು.

(3) ಗಂಭೀರ ದುರ್ನಡತೆ ಅಥವಾ ಗಂಭೀರ ಅಕ್ರಮಕ್ಕೆ ಸಂಬಂಧಿಸಿದ ದೂರುಗಳನ್ನು ಯಾವ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವಿರುದ್ಧ ದಾಖಲಿಸಲಾಗಿದೆಯೋ, ಮತ್ತು ಅಂಥ ಅಧಿಕಾರಿ ಅಥವಾ ಇತರ ಸಿಬ್ಬಂದಿಯು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಂಥ ವಲಯದಲ್ಲಿ ಮುಂದುವರಿಯತಕ್ಕದ್ದಲ್ಲವೆಂದು ನೇಮಕಾತಿ ಪ್ರಾಧಿಕಾರಕ್ಕೆ ಮನವರಿಕೆಯಾದರೆ, ಆಗ ಆತನನ್ನು ಆತನು ಕಾರ್ಯನಿರ್ವಹಿಸುತ್ತಿದ್ದ ವಲಯದಿಂದ ವರ್ಗಾವಣೆ ಮಾಡತಕ್ಕದ್ದು.

**7. ತೊಂದರೆಗಳನ್ನು ನಿವಾರಿಸಲು ಅಧಿಕಾರ.**– ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದಂಥ ಮತ್ತು ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಅಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಯಾವ ಆದೇಶವನ್ನೂ, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಪೂರ್ಣಗೊಂಡ ತರುವಾಯ ಮಾಡತಕ್ಕದ್ದಲ್ಲ.

**8. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.**– ಸರ್ಕಾರವು, ಅಧಿಸೂಚನೆಯ ಮೂಲಕ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ನಮೂದುಗಳಲ್ಲಿ ಯಾವುದೇ ನಮೂದನ್ನು ಸೇರಿಸಬಹುದು, ಮಾರ್ಪಡಿಸಬಹುದು ಅಥವಾ ತೆಗೆದುಹಾಕಬಹುದು.

**9. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕ್ರಮದ ಬಗ್ಗೆ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಕೈಗೊಳ್ಳಲು ಅವಕಾಶವಿರತಕ್ಕದ್ದಲ್ಲ.

**10. ನಿಯಮಗಳ ರಚನಾಧಿಕಾರ.–** (1) ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಮತ್ತು ಪೂರ್ವಪ್ರಕಟಣೆಯನ್ನು ನೀಡಿದ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಎಲ್ಲ ನಿಯಮಗಳನ್ನು ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಅದು ಅಧಿವೇಶನದಲ್ಲಿದ್ದರೆ ಮಂಡಿಸತಕ್ಕದ್ದು ಮತ್ತು ಅದು ಅಧಿವೇಶನದಲ್ಲಿಲ್ಲದಿದ್ದರೆ, ಆಗ ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಹದಿನಾಲ್ಕು ದಿವಸಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಥವಾ ನಿಕಟಪೂರ್ವದ ಅಧಿವೇಶನ ಕೊನೆಗೊಳ್ಳುವ ಮುಂಚೆ ರಾಜ್ಯ ವಿಧಾನ ಮಂಡಲವು ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಲು ಅಥವಾ ನಿಯಮದ ರದ್ದತಿಗೆ ಒಪ್ಪಿದರೆ, ನಿಯಮವು, ಮಾರ್ಪಾಡನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ, ಅಂಥ ಮಾರ್ಪಾಡಾದ ರೂಪದಲ್ಲಿ ಮಾತ್ರ ಜಾರಿಗೆ ಬರತಕ್ಕದ್ದು ಅಥವಾ ಸಂದರ್ಭಾನುಸಾರ ರದ್ದಾಗತಕ್ಕದ್ದು. ಅದು ಹೇಗಾದರೂ ಇರಲಿ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು, ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದರ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ಅರ್ಥವ್ಯಾಪ್ತಿಯಲ್ಲಿ ಬರುವ ಹುದ್ದೆಗಳು**

**ಅನುಸೂಚಿ–I**

(2(ಇ) ಪ್ರಕರಣವನ್ನು ನೋಡಿ)

| ಕ್ರಮ ಸಂಖ್ಯೆ | ಹುದ್ದೆಗಳ ಪ್ರವರ್ಗ |
|---|---|
| I | **ಗ್ರೂಪ್ ಎ:–**<br>1. ಕೃಷಿ ಜಂಟಿ ನಿರ್ದೇಶಕರು<br>2. ಕೃಷಿ ಉಪ ನಿರ್ದೇಶಕರು<br>3. ಕೃಷಿ ಸಹಾಯಕ ನಿರ್ದೇಶಕರು<br>4. ಕೃಷಿ ಸಹಾಯಕ ನಿರ್ದೇಶಕರು (ರೈತ ಮಹಿಳೆ)<br>5. ಆಡಳಿತಾಧಿಕಾರಿ |

# ಅನುಸೂಚಿ-II

(2(ಇ) ಪ್ರಕರಣವನ್ನು ನೋಡಿ)

| ಕ್ರಮ ಸಂಖ್ಯೆ | ಹುದ್ದೆಗಳ ಪ್ರವರ್ಗ |
|---|---|
| I | ಅನುಸೂಚಿ-Iರಲ್ಲಿ ಹೇಳಲಾದ ಮತ್ತು ಈ ಕೆಳಗೆ ಹೇಳಲಾದ ಹುದ್ದೆಗಳನ್ನು ಹೊರತುಪಡಿಸಿ ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿಯ ಎಲ್ಲಾ ಇತರ ಸಿಬ್ಬಂದಿ |

| ಕ್ರಮ ಸಂಖ್ಯೆ | ಪ್ರವರ್ಗ |
|---|---|
| **ಗ್ರೂಪ್-ಬಿ** | |
| 1. | ಕೃಷಿ ಅಧಿಕಾರಿ |
| 2. | ಆಡಳಿತ ಸಹಾಯಕರು |
| 3. | ಸಹಾಯಕ ಕೃಷಿ ಅಧಿಕಾರಿ/<br>ಸಹಾಯಕ ಕೃಷಿ ಅಧಿಕಾರಿ<br>(ಕೃಷಿ ಇಂಜಿನಿಯರಿಂಗ್ ಮತ್ತು ಜಲ ನಿರ್ವಹಣೆ) |
| 4. | ಸಹಾಯಕ ಕೃಷಿ ಅಧಿಕಾರಿ (ರೈತ ಮಹಿಳೆ) |
| **ಗ್ರೂಪ್-ಸಿ** | |
| 5. | ಅಧೀಕ್ಷಕರು |
| 6. | ಕೃಷಿ ಅನುಷ್ಠಾನ ಮೇಲ್ವಿಚಾರಕರು |
| 7. | ಪ್ರಥಮ ದರ್ಜೆ ಸಹಾಯಕರು |
| 8. | ಶೀಘ್ರಲಿಪಿಗಾರರು |
| 9. | ಹಿರಿಯ ಬೆರಳಚ್ಚುಗಾರರು/ಬೆರಳಚ್ಚುಗಾರರು |
| 10. | ಹಿರಿಯ ಚಾಲಕರು/ಚಾಲಕರು |
| 11. | ಟ್ರೇಸರ್ |
| 12. | ಕೃಷಿ ಸಹಾಯಕರು |
| 13. | ದ್ವಿತೀಯ ದರ್ಜೆ ಸಹಾಯಕರು |
| 14. | ಪ್ರಯೋಗಶಾಲಾ ಸಹಾಯಕ |
| **ಗ್ರೂಪ್-ಡಿ** | |
| 15. | ಪ್ರಯೋಗ ಶಾಲಾ ಅಟೆಂಡರ್/ ಅಟೆಂಡರ್ |
| 16. | ಬಾಣಸಿಗರು |
| 17. | ಗ್ರೂಪ್-ಡಿ |

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನೆಗೆ ಸಂಬಂಧಿಸಿದ ಜ್ಞಾಪನಪತ್ರ

| | |
|---|---|
| ಖಂಡ 2: | (ಎಫ್) ಉಪ-ಖಂಡವು, ಕೌನ್ಸಿಲಿಂಗ್ ಪ್ರಕ್ರಿಯೆಗಾಗಿ ಅಂಥ ಇತರ ಮಾನದಂಡವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 3: | ಪ್ರಾರಂಭಿಕ ನೇಮಕಾತಿ, ಬಡ್ತಿ ಮತ್ತು ವರ್ಗಾವಣೆಗಾಗಿ ಕೌನ್ಸಿಲಿಂಗ್ ಪ್ರಕ್ರಿಯೆಯ ವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 5: | (5)ನೇ ಉಪ-ಖಂಡವು, ವರ್ಗಾವಣೆಯ ಅಂಥ ಇತರ ಮಾನದಂಡವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 6: | ವರ್ಗಾವಣೆಗೆ ಪರಿಗಣಿಸಬೇಕಾದ ಇತರ ಮಾನದಂಡಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 10: | ಈ ಅಧಿನಿಯಮದ ಉದ್ದೇಶಗಳನ್ನು ಸಾಮಾನ್ಯವಾಗಿ ಈಡೇರಿಸಲು ಪೂರ್ವಪ್ರಕಟಣೆಯ ತರುವಾಯ, ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಕೃಷ್ಣ ಬೈರೇಗೌಡ**
ಕೃಷಿ ರಾಜ್ಯ ಸಚಿವರು

**ಎಂ. ಗುರುರಾಜ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ, ಬೆಳಗಾವಿ, ಫಿ7, ಕಾಸೂ , 750-ಪ್ರತಿಗಳು 3ನೇ ಜುಲೈ, 2015

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
EIGHTH SESSION

# THE KARNATAKA STATE CIVIL SERVICES (REGULATION OF TRANSFER OF AGRICULTURE DEPARTMENT OFFICERS AND OTHER STAFF) BILL, 2015

**(L.A. Bill No. 26 of 2015)**

A Bill to provide for regulation of transfer of Agriculture Department Officers and other staff so as to ensure the availability of staff in Agriculture Offices in all rural areas.

Whereas it is expedient to provide for regulation of transfer of Agriculture Department Officers and other staff so as to ensure the availability of staff in all the Agriculture Offices in the rural areas in the State of Karnataka;

Be it enacted by the Karnataka State Legislature in the sixty-sixth year of the Republic of India, as follows:-

**1. Short title and commencement.-** (1) This Act may be called the Karnataka State Civil Services (Regulation of Transfer of Agriculture Department Officers and Other Staff) Act, 2015.

(2) It shall come into force from such date as the State Government may, by notification, appoint.

**2. Definitions.-** In this Act, unless the context otherwise requires,-

(a) "appointment" means appointment by direct recruitment or by promotion of Agriculture Department Officers and other staff;

(b) "Competent authority" in respect of Group-A posts, the Government and in respect of Group-B, C and D posts, the Commissioner for Agriculture;

(c) "Government" means the Government of Karnataka;

(d) "Government Institution" means and includes a Training Centre, an administrative office or any other institutions or any other offices by whatever name called established by the Government;

(e) "Officer and other staff" means an Officer and other staff of agriculture department appointed by the Appointing Authority to any of the category of posts specified in schedule-I and schedule-II;

(f) "process of Counselling" means the process of giving an opportunity to a person considered for appointment or transfer to opt a place or post notified by the Government on priority, which is being given based on the length of service put in by him in the place of Zone where he is working and such other criteria as may be prescribed;

(g) "rural Area" means area other than the urban area;

(h) "transfer" means posting of Officers and other staff from one place of working to a post in another place of working.;

(i) "transfer on deputation" means a transfer of Officers and other staff on deputation to other Departments or Corporations or Boards or Command area development Authority or other Government institutions for a period of not more than five years;

(j) "Urban area" means any area situated within the limits of a city corporation, city municipal council town municipality or town panchayat as established under the Karnataka Municipal Corporations Act, 1976 or the Karnataka Municipalities Act, 1964, and includes upto such distance away from the limits of the area, notified as such by the Government from time to time;

(k) "Zone" means any area as classified hereunder, namely,-

(i) "Zone-A" means urban area within the limits of a City Corporation or City Municipality;

(ii) "Zone-B" means urban area within the limits of Town Municipality and Town Panchayat; and

(iii) "Zone-C" means all other remaining area not covered under zone-A and zone-B.

(l) "schedule" means a schedule appended to this Act.

**3. Initial appointment, promotion and transfer through counselling.-** The initial appointment, promotion and transfer of Officers

and other staff under this Act, shall be done through a process of counselling conducted in such manner, as may be prescribed.

**4. Provisions for Compulsory service.-** (1) Every Officer and other Staff specified in column (2) of schedule-III shall compulsorily serve for a minimum number of years in the zone specified in column (3) thereof.

(2) Government is empowered to transfer in public interest the Officers and other staff who have completed the minimum number of years of service specified in column (3) of the schedule-III.

**5. Compulsory Service of Officers and other staff.-** (1) The competent Authority while making initial appointment or promotion or transfer of Officers and other staff shall ensure the availability of vacancies in the zones specified in schedule-III and fill up such vacancies in first instance. The initial appointment or promotion or transfer shall be first made to Zone C. If there are no vacancies belonging to that category then vacancies in Zone B and next to the vacancies in Zone A depending on the jurisdiction of the category of post.

(2) Officers and other staff who are in service on the date of commencement of this Act and have not served for a minimum number of years in the zone specified in schedule-III before the date of commencement of this Act, shall be transferred to such zone:

Provided that the provisions relating to compulsory transfer of Officers and other staff to zone specified in schedule-III shall not apply,-

(i) to a person who has attained the age of fifty five years;

(ii) to the case of both husband and wife being State Government or Central Government employees and if one of the spouse is working in a different place, then the other spouse may be transferred to the same place or nearby place, if he is in the same place, subject to availability of clear vacancy;

(iii) to an employee if she is a widow;

(iv) to an employee if he is physically challenged;

(v) to an employee who has spouse or children suffering from serious ailment, for which medical treatment is not available at his place of work and the transfer is necessary to a place where such treatment is available so as to provide the required medical treatment:

Provided further that, no transfers shall be considered unless the concerned employee produces a certificate from the District Medical Board Specifying the nature of ailment, stating the fact that the required treatment is not available at his place of work, specifying the place where the required treatment is available and certifying that his transfer is necessary to such a place to provide him the required medical treatment.

(3) No Officers and other staff shall be entitled for a posting in his native taluk.

(4) If no vacancy is available for initial appointment or promotion or transfer in respect of the post for which compulsory service is required, a vacancy may be created by transfer of an Officer and other staff who has completed the maximum number of years of service in such zone. A person who has put in more number of years of service in Zone C may be transferred from Zone-C to Zone-B and similarly from Zone-B to Zone-A.

(5) The transfer shall be based on the length of service and such other criteria as may be prescribed.

**6. Transfer of Officers and other staff in public interest.-** (1) The Officers and other staff who are in service on the date of commencement of this Act and has completed the required minimum number of years of continuous service in Government offices or Government institution in an area or in a zone may be transferred through process of counselling in public interest considering length of service and such other criteria as may be prescribed, to another Government Office or Government Institutions in the same zone or to the next zone or area:

Provided that the total number of such transfers during a year shall not exceed ten percent of the number of the cadre strength in the category of post.

(2) Officers and other staff on reinstatement from suspension shall not be posted to a higher zone.

Explanation.- Higher zone means a zone higher than the zone where the officer and other staff was working before suspension. Zone A shall be considered as higher zone to zone B and zone B shall be the higher zone to zone C.

(3) The Officers and other staff against whom complaints related to grave misconduct or grave Irregularity is filed, and the appointing authority is

satisfied that such Officer or other staff shall not be continued in such zone in public interest, then he shall be transferred from the zone where he was working.

**7. Power to remove difficulties**.- If any difficulty arises in giving effect to the provisions of this Act, the Government may by order published in the official Gazette make provisions not inconsistent with the provisions of this Act, as it appears to be necessary or expedient for removing the difficulty:

Provided that no such order shall be made after the expiry of a period of three years from the date of commencement of this Act.

**8. Power to amend the Schedule**.- The Government may by notification add, alter or remove any of the entries specified in the schedule.

**9. Protection of action taken in good faith.-** No suit, prosecution or other legal proceedings shall lie against any officer of the Government for anything done in good faith or intended to be done under this Act.

**10. Power to make Rules:-** (1) The Government may, by notification and after previous publication, make rules to carry out the purposes of this Act.

(2) Every rule made under this Act shall, immediately after it is made, be laid before the Legislature of the State, if it is in session and if it is not in session, in the session immediately following for a total period of fourteen days which may be comprised in one session or in two successive sessions and if, before the expiration of the session in which it is so laid or the session immediately following the Legislature of the State agrees in making any modification in the rule or in the annulment of the rule, the rule shall, from the date on which the modification or annulment is notified, have effect only in such modified form or shall stand annulled as the case may be, so however, that any such modification or annulment shall be without prejudice to the validity of anything previously done under that rule.

## POSTS WHICH COME UNDER THE MEANING OF OFFICERS AND OTHER STAFF

### SCHEDULE-I
(see section 2 (e))

| Sl.No. | Category of Posts |
|---|---|
| I | **Group-A:-**<br>1. Joint Director of Agriculture<br>2. Deputy Director of Agriculture<br>3. Assistant Director of Agriculture<br>4. Assistant Director of Agriculture(Farm Woman)<br>5. Administrative Officer |

### SCHEDULE-II
(see section 2 (e))

| Sl.No. | Category of Posts |
|---|---|
| I | All other staff of Group-B, Group-C and Group-D excluding the posts mentioned in Schedule-I and as mentioned below. |

| Sl.No. | Catagory |
|---|---|
| **Group-B** | |
| 1 | Agriculture Officer |
| 2 | Administrative Assistant |
| 3 | Assistant Agriculture Officer/<br>Assistant Agriculture Officer<br>(Agriculture Engineering and Water Management) |
| 4 | Assistant Agriculture Officer (Farm Woman) |
| **Group-C** | |
| 5 | Superintendent |
| 6 | Agriculture Implement Supervisor |
| 7 | First Division Assistant |
| 8 | Stenographer |
| 9 | Senior Typist/ Typist |

| | |
|---|---|
| 10 | Senior Driver/Driver |
| 11 | Tracer |
| 12 | Agriculture Assistant |
| 13 | Second Division Assistant |
| 14 | Lab Assistant |
| **Group-D** | |
| 15 | Lab Attender/ Attender |
| 16 | Cooks |
| 17 | Group-D |

**SCHEDULE-III**
(see section 4)

| **Sl.No** | **Category** | **Zone** |
|---|---|---|
| **Group-A** | | **Minimum Period of Service** |
| **(1)** | **(2)** | **(3)** |
| 1 | Joint Director of Agriculture | 3 years in Zone-B |
| 2 | Deputy Director of Agriculture | 3 years in Zone-B |
| 3 | Assistant Director of Agriculture | 3 years in Zone-B or Zone-C |
| 4 | Assistant Director of Agriculture (Farm Woman) | 3 years in Zone-B or Zone-C |
| 5 | Administrative Officer | 3 years in Zone-B |
| **Group-B** | | |
| 6 | Agriculture Officer | 3 years in Zone-C |
| 7 | Agriculture Officer (Farm Woman) | 3 years in Zone-C |
| 8 | Assistant Agriculture Officer/ Assistant Agriculture Officer (Agriculture Engineering and Water Management) | 3 years in Zone-C |
| 9 | Administrative Assistant | 3 years in Zone-B |
| **Group-C** | | |
| 10 | Superintendent | 4 years in Zone-B |
| 11 | Agriculture Implements Supervisor | 4 years in Zone-B |

## FINANCIAL MEMORANDUM

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

| | |
|---|---|
| **Clause 2:** | Sub-clause (f), empowers the State Government to prescribe such other criteria for process of counseling. |
| **Clause 3:** | Empowers the State Government to prescribe the manner of process of counseling to be done for initial appointment, promotion and transfer. |
| **Clause 5:** | Sub-clause (5), empowers the State Government to prescribe such other criteria for transfer. |
| **Clause 6:** | Empowers the State Government to make rules regarding the other criteria to be considered for transfer. |
| **Clause 10:** | Empowers the State Government to make rules in general to carryout the purposes of this Act, after previous publication. |

The proposed delegation of Legislative power is normal in character.

**KRISHNA BYREGOWDA**
State Minister for Agriculture

**M. GURURAJA**
Secretary
Karnataka Legislative Assembly

Government Press, Suvarna Soudha, Belagavi, P7, W.D. , Copies 750, 3rd July, 2015